# ಕಿನ್ನರಿ



ಅಕ್ಕಾ,
ಆತ್ಮಸಂಗಾತಕ್ಕೆ ನೀನುಂಟೆಂದು ಹೇಳಲು
ನಿನಗೊಂದು ಹೆಸರಿತ್ತು
ಮಣ್ಣ ಕಾಯದ ತುಂಬ ನಿನ್ನ ಬಯಲು ಜೀವ
ಅರಸಿ, ಅರಸಿ ಅವನ ಬೆರೆಸಿತ್ತು.

ಹೆಸರೆಂದರೆ ಹೆಸರಲ್ಲ
ಮೋಹ ಕಳೆದುಳಿದ ಅಲುಗು
ಕಾಯ ಕಳೆದುಳಿದ ಬೆಳಗು ಕಾಣಾ

ಕೊಟ್ಟ ಹೆಸರ ಕಸಿದು, ಬೆಳಗ ಕಳೆದು
ನನ್ನ ಕುಲವಳಿದು, ಜಗದ ಜಲವಳಿದು
ಉರಿ ಉರಿ ನಾಲಿಗೆಯಲ್ಲಿ ಜೀವ ಬೇಯುಸಿ
ನಂಜಿಕೊಂಡವರ ನಿಲವಿಗೆ ನಾ ತಲೆ ಬಾಗುವೆನವ್ವ

ಎಲ್ಲಿಯೂ ಹೇಳಲಾಗದ ನುಡಿಗಳನು
ನಾಲಿಗೆ ಪಸೆಯಾಗಿಸಿ
ಮಣ್ಣಿಂದ ಬೇರಿಗೆ, ಬೇರಿಂದ ಕಾಂಡಕ್ಕೆ
ಕಾಂಡದಿಂದ ಗಿಡ ಹೂವು, ಕಾಯಿ, ಹಣ್ಣು
ಕಂಡುಂಡ ದೇವನ ಕಣ್ಣ
ನೀರಾಗಿಸಿ ನಲಿದೆನೆ ಅಕ್ಕಾ



ಒಂಭತ್ತು ಬಾಗಿಲೊಳು ಒಮ್ಮೆಲೆ ಕಾಲಿಟ್ಟು ಹೋದವ
ಮರಳಿ, ಮುರಳಿಯ ನಾದಕ್ಕೆ ದನಿಯಾಗಲೊಲ್ಲೆ
ಗಾಳಿಯಾಗಲೊಲ್ಲೆ,
ಭವದ ಬಣ್ಣ ಇಳಿವಿದವನ
ಕಣ್ಣುಸಿರಳಿದವನ ಕರುಳ ತಂತಿ ಮೀಟಿ
ಮತ್ತೇಕೆ? ಮತ್ತಾವ ನಾದ ಕೇಳಲೆಂದು
ನುಡಿಸುವರೋ ಕಾಣೆ

ಅಕ್ಕಾ, ನಿನ್ನ ತನುವಿನ ಲಜ್ಜೆಯನಿಳುಹಿ
ಒಳಗಾಗಿಸಿಕೊಂಡವನಾಣೆ
ಹಾಡಲೆಂದು ಏಸೊಂದು ವಸಂತವನು ಎದುರು
ತಂದಿಟ್ಟರೇನು, ನಾನು ಮಾಗಿಯ ಕೋಗಿಲೆಯವ್ವ

ಜೊತೆ ಆಟಗಾರರಿಲ್ಲದ, ಆಟಿಕೆಗಳಿಲ್ಲದ ಮಗುವಿಗೆ
ಮಣ್ಣೆ ಸಂಗಾತಿಯಾದಂತೆ
ನನಗೀಗ ಆತ್ಮವೇ ಸಂಗಾತಿಯಾಗಿದೆಯವ್ವ.